**K.S. SAROJAMMA**
Deputy Secretary to Government
[Disaster Management & Stamps & Registration]
Revenue Department

ದಿನಾಂಕ: 9-9-2014, 4.00ಘಂಟೆ

## ಜಮ್ಮು ಮತ್ತು ಕಾಶ್ಮೀರದ ಪ್ರವಾಹದ ಬಗ್ಗೆ ಪತ್ರಿಕಾ ಪ್ರಕಟಣೆ

ಕಳೆದ 4-5 ದಿನಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಉಂಟಾಗಿರುವ ಪ್ರವಾಹದಿಂದ ಕರ್ನಾಟಕದ ಹಲವಾರು ಪ್ರವಾಸಿಗರು ಸಿಲುಕಿಹಾಕಿಕೊಂಡಿದ್ದು, ಅವರ ನೆರವಿಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಇದುವರೆವಿಗೂ ರಾಜ್ಯದ ಸುಮಾರು 549 ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ್ದು, ಇತ್ತೀಚಿನ ಮಾಹಿತಿಯಂತೆ ಸುಮಾರು 75 ಜನರನ್ನು ರಕ್ಷಿಸಲಾಗಿದ್ದು, ಇದರಲ್ಲಿ ಕೆಲವರು ಈಗಾಗಲೇ ಬೆಂಗಳೂರಿಗೆ ಹಿಂತಿರುಗುತ್ತಿದ್ದಾರೆ. ದಿನಾಂಕ:8-9-2014ರ ಬೆಳಿಗ್ಗೆಯಿಂದ ಮಳೆಯ ಪ್ರಮಾಣ ಹಾಗೂ ಪ್ರವಾಹದ ತೀವ್ರತೆ ಕಡಿಮೆಯಾಗಿದ್ದು, ಸುಮಾರು 40,000 ಜನರನ್ನು ರಕ್ಷಿಸಲಾಗಿದ್ದು ಇದರಲ್ಲಿ ಕರ್ನಾಟಕದ ಹಲವಾರು ಮಂದಿ ಇರುವ ಸಾಧ್ಯತೆ ಇದೆ.
2. ಜಮ್ಮು ಮತ್ತು ಕಾಶ್ಮೀರದಲ್ಲಿ ಜನರನ್ನು ರಕ್ಷಿಲು ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಭಾರತೀಯ ಸೇನೆ, ಬಿ.ಎಸ್.ಎಫ್, ಎನ್.ಡಿ.ಆರ್.ಎಫ್ ವತಿಯಿಂದ ರಕ್ಷಣಾ ಕಾರ್ಯ ನಡೆಯುತ್ತಿದೆ.
3. ಜಮ್ಮು ಮತ್ತು ಕಾಶ್ಮೀರದಲ್ಲಿ ಕರ್ನಾಟಕದ ಅನೇಕ ಪ್ರವಾಸಿಗರು ಸಿಲಿಕಿಹಾಕಿಕೊಂಡಿದ್ದು, ಅವರನ್ನು ಸುರಕ್ಷಿತವಾಗಿ ಕರೆ ತರಲು ರಾಜ್ಯ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳಾದ ಶ್ರೀ ರಮಣದೀಪ್, ಭಾ.ಆ.ಸೇ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಹಾಗೂ ಶ್ರೀ ವಾಲಿಯಾ, ಮ್ಯಾನೇಜರ್, ಕರ್ನಾಟಕ ಭವನ, ನವದೆಹಲಿ ರವರನ್ನು ನಿಯೋಜಿಸಲಾಗಿದೆ. ಸದರಿ ಅಧಿಕಾರಿಗಳು, ಮೊಬೈಲ್ ಸಿಮ್ ಹಾಗೂ ಬ್ಯಾಟರಿ, ಪವರ್ ಬ್ಯಾಂಕ್ ನೊಂದಿಗೆ ಈಗಾಗಲೇ ಶ್ರೀನಗರಕ್ಕೆ ತಲುಪಿದ್ದು, ರಕ್ಷಣಾ ಕಾರ್ಯಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.
4. ಕರ್ನಾಟಕದ ಜನರನ್ನು ರಕ್ಷಿಸುವ ಸಲುವಾಗಿ ರೂ.15.00ಲಕ್ಷ ಬಿಡಗಡೆ ಮಾಡಲಾಗಿದ್ದು, ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಾಗುವುದು.
5. ಇದುವರೆವಿಗೂ ಪತ್ತೆಯಾಗದವರ ಹೆಸರು, ವಯಸ್ಸು ಮತ್ತು ಇತರೆ ವೈಯಕ್ತಿಕ ವಿವರಗಳನ್ನು ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆಯ ಸಹಾಯವಾಣಿಗೆ ಒದಗಿಸಿದಲ್ಲಿ ಅವರನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುವುದೆಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.
6. ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ 3-4ದಿನಗಳಿಂದ ವಿದ್ಯುತ್ ಅಭಾವ ಹಾಗೂ ದೂರವಾಣಿಗಳು ಕೆಟ್ಟು ಹೋಗಿದ್ದರಿಂದ, ಅಲ್ಲಿನ ಜನರನ್ನು ಸಂಪರ್ಕಿಸುವುದು ಸಾಧ್ಯವಾಗುತ್ತಿಲ್ಲ.

ಜಮ್ಮು ಮತ್ತು ಕಾಶ್ಮೀರದ ಪ್ರವಾಹದಲ್ಲಿ ಸಿಲುಕಿಕೊಂಡವರ ಪ್ರವಾಸಿಗರ ಮಾಹಿತಿಯನ್ನು ಕಾಲಕಾಲಕ್ಕೆ ಪಡೆಯಲು ಮತ್ತು ಸಂಬಂಧಪಟ್ಟವರಿಗೆ ಮಾಹಿತಿ ಒದಗಿಸಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆ ವಿಭಾಗದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದಲ್ಲಿ 24*7 ಸಹಾಯವಾಣಿ ತೆರೆಯಲಾಗಿದೆ ದೂರವಾಣಿ ಸಂಖ್ಯೆ : 1070, 22340676.

(ಕೆ.ಎಸ್.ಸರೋಜಮ್ಮ)
ಉಪ ಕಾರ್ಯದರ್ಶಿಗಳು

# 501, 3rd Gate, 5th Floor, M.S. Building, Dr. B.R. Ambedkar Veedhi, Bangalore - 560 001
Tel : 080-22261314 / 22032426 (Office) (Fax) : 22258166